ಶ್ರೀ ಮಲ್ಲಿಕಾರ್ಜುನ ಖರ್ಗೆ: ಮೊನ್ನೆ ಒಂದು 50 ರಿಂದ 60 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ. ರಾಮತಾಳ ಯೋಜನೆಗೆ ಸಮಾಧಾನವಾಗಿರಿ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್: ಅಲ್ಲಿ ಬಸ್‌ಸ್ಟ್ಯಾಂಡ್‌ನ ಅವಶ್ಯಕತೆ ಬಹಳ ಇದೆ. ಡೈಲಿ ಅಲ್ಲಿ 370 ಟ್ರಿಪ್‌ಗಳು ಆಪರೇಟ್ ಆಗುತ್ತಿದೆ.

ಶ್ರೀ ಗೋವಿಂದ ಎಂ ಕಾರಜೋಳ ಇವರ ಪರವಾಗಿ ನಿರಾಣಿ ಮುರುಗೇಶ್ ರುದ್ರಪ್ಪ :– ಮಾನ್ಯ ಉಪಾಧ್ಯಕ್ಷರೆ, ಆಗಸ್ಟ್ 2005ರಲ್ಲಿ ಹೊಸ ಬಸ್‌ಡಿಪೋವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದನ್ನು ಪ್ರಾರಂಭ ಮಾಡುವುದಕ್ಕಿಂತಲೂ ಮುಂಚೆ ಅಲ್ಲಿ ಸಿಬ್ಬಂದಿಗಳು ಬೇಕಾಗುತ್ತದೆ. ಅಲ್ಲಿಗೆ ಎಷ್ಟು ಜನ ಡ್ರೈವರ್‌ಗಳು,

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5053
ಸದಸ್ಯರ ಹೆಸರು : ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಬೀಳಗಿ ಪಟ್ಟಣದ ಬಸ್ ಡಿಪೋ ಕಾರ್ಯಾರಂಭ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ.	ಹಾಗಿದ್ದಲ್ಲಿ, ಬಾಕಿ ಉಳಿದಿರುವ ಇಂಧನದ ಟ್ಯಾಂಕ್ ಹಾಗೂ ವಿದ್ಯುಚ್ಛಕ್ತಿಯ ಸಂಪರ್ಕದ ಸೌಲಭ್ಯ ಒದಗಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ.	ಇಂಧನ ಟ್ಯಾಂಕ್‌ನ್ನು ಭಾರತೀಯ ತೈಲ ನಿಗಮದ ವತಿಯಿಂದ ಅಳವಡಿಸುವ ಬಗ್ಗೆ ಅಗ್ನಿಶಾಮಕ ದಳದವರಿಂದ ಆಕ್ಷೇಪಣೆ ಇದ್ದು, ಇಲಾಖೆಯ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ನಿರಾಕ್ಷೇಪಣ ಪತ್ರ ಪಡೆಯುವ ಹಂತದಲ್ಲಿದೆ. ಹೆಸ್ಕಾಂ ಸೇವೆಯೊಂದಿಗೆ ವಿದ್ಯುಚ್ಛಕ್ತಿ ಕೆಲಸಗಳು ಸಂಪೂರ್ಣಗೊಂಡಿರುತ್ತವೆ.
ಇ.	ಯಾವ ನಿರ್ದಿಷ್ಟ ಅವಧಿಯಲ್ಲಿ ಕಾರ್ಯಾರಂಭಕ್ಕೆ ಅನುಮತಿ ಕೊಡಲಾಗುವುದು?	ಆಗಸ್ಟ್ 2005ರೊಳಗೆ ಕಾರ್ಯರಂಭಕ್ಕೆ ಅನುಮತಿ ಕೊಡಬಹುದಾಗಿದೆ.

ಕಂಡಕ್ಟರ್‌ಗಳು ಹಾಗು ಎಷ್ಟು ಬಸ್‌ಗಳನ್ನು ಕೊಡುತ್ತೀರಿ ಮತ್ತು ರಿಪೇರಿ ಮತ್ತು ಸರ್ವಿಸಿಂಗ್ ಬಗ್ಗೆ ಬೇಕಾಗಿರತಕ್ಕಂತಹ ಮೆಕ್ಯಾನಿಕ್‌ಗಳು ಹಾಗು ಹೆಲ್ಪರ್ಸ್ ಮತ್ತು ಆಫೀಸ್ ಸ್ಟಾಫನ್ನು ಎಷ್ಟು ಕೊಡುತ್ತೀರಿ ಎಂಬುದರ ಬಗ್ಗೆ ದಯವಿಟ್ಟು ಈ ಸಭೆಗೆ ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಅಲ್ಲಿಗೆ ಎಷ್ಟು ಬಸ್‌ಗಳನ್ನು ಕೊಡುತ್ತೇವೆ, ಅದಕ್ಕೆ proportionately staff ಕೂಡ ಕೊಡುತ್ತೇವೆ. ಒಂದು ಬಸ್ ಎಂದರೆ ಅದರ ಬಗ್ಗೆ ನಮ್ಮ ರೇಷಿಯೋ ಪ್ರಕಾರ ಸುಮಾರು 1.6 ಹೆಚ್ಚು ಕಡಿಮೆ ಅವರೇಜ್ ಬರುತ್ತದೆ. ಆ ದೃಷ್ಟಿಯಿಂದ ಅಲ್ಲಿಗೆ ಎಷ್ಟು ಬಸ್‌ಗಳು ಹೋಗುತ್ತವೆ. ಅಷ್ಟು ಕಂಡಕ್ಟರ್‌ಗಳು ಹಾಗೂ ಮೆಕ್ಯಾನಿಕ್‌ಗಳನ್ನು ಕೂಡ ನಾವು ಒದಗಿಸಿಕೊಡುತ್ತೇವೆ. ಇಲ್ಲಿಯವರೆಗೆ ಅದು ನಿಂತು ಹೋಗಿತ್ತು. ಇತ್ತೀಚೆಗೆ ನಾವು ಬೀಳಗಿಯಲ್ಲಿ ಮಾಡಲೇ ಬೇಕು ಏಕೆಂದರೆ, ಬೇರೆ ತಾಲೂಕುಗಳಿಗೆ ಹೋಲಿಸಿದರೆ ಅದು ಚಿಕ್ಕ ತಾಲೂಕು ಆಗಿದೆ, ಅಲ್ಲಿ ಹೆಚ್ಚಿನ ಭಾಗ ಮುಳುಗಡೆಯಾಗಿರುವ ಕಾರಣ ಇಲ್ಲಿ ಮಾಡಬೇಕೆಂಬುದರ ಬಗ್ಗೆ ಮೊನ್ನೆ ನಾನು ನಿರ್ಣಯವನ್ನು ತೆಗೆದುಕೊಂಡು ಈಗಾಗಲೇ ಅಗ್ನಿಶಾಮಕದಳದವರಿಗೆ ಕೂಡ ಕ್ಲಿಯರೆನ್ಸ್‌ನ್ನು ಕೊಡುವುದಕ್ಕೆ ಹೇಳಿದ್ದೇನೆ. ಹೆಸ್ಕಾಂ ಅಧಿಕಾರಿಗಳಿಗೂ ಕೂಡ ಇದರ ಬಗ್ಗೆ ಡೈರಕ್ಷನನ್ನು ಕೂಡ ಕೊಟ್ಟಿದ್ದೇನೆ.

ಶ್ರೀ ಗೋವಿಂದ ಎಂ ಕಾರಜೋಳ: ನಿಂತು ಹೋಗಿರುವಂತಹ ಬಸ್ ಡಿಪೋ ಬಗ್ಗೆ ಮಂಜೂರು ಮಾಡಿ ಆ ಕಾರ್ಯ ಪ್ರಾರಂಭ ಮಾಡಬೇಕು. ಇದು ಆಗಸ್ಟ್‌ನಲ್ಲಿ ಕೆಲಸ ಮಾಡುವಂತಾಗಬೇಕು. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಯಲ್ಲಿ ನಾನು ಅವರಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ. ಅವರ ಕೈಯಿಂದಲೇ ಉದ್ಘಾಟನೆಯನ್ನು ಕೂಡ ಮಾಡಬೇಕು. ಆಗಸ್ಟ್‌ನಲ್ಲಿ ಇದಕ್ಕೆ ನಿಗದಿಯಾದಂತಹ ಡೇಟನ್ನು ಕೊಟ್ಟರೆ ಒಳ್ಳೆಯದು.